ಶ್ರೀ ಜಿ. ರಾಮೆಗೌಡ:—ಸರ್ಕಾರದವರು ಆಗಾಗ್ಗೆ ಕೊಟ್ಟಿರತಕ್ಕ ಸರ್ಕ್ಯುಲರ್‌ನಲ್ಲಿ ಇಂಡಿವಿಜ್ಯುಯಲ್ ವೆಲ್ಸ್‌ಗೆ ಕೊಡಬಹುದು ಎಂದೂ ರಾಜ್ಯದಾದ್ಯಂತ ವಿವರಣೆ ಕೊಟ್ಟಿದ್ದೀರಾ? ಹಾಗೆ ಕೊಟ್ಟಿದ್ದರೆ ಅದರ ಸಾಲ ಎಷ್ಟು? ಗ್ರಾಂಟ್ ಎಷ್ಟು ಎಂಬುದನ್ನು ವಿವರವಾಗಿ ಹೇಳುತ್ತೀರಾ?

ಶ್ರೀ ಹೆಚ್. ವಿ. ಕೌಜಲಗಿ:—ಫ್ಲಾಮಿನ್ ಆಫೆಕ್ಟೆಡ್ ಏರಿಯಾದಲ್ಲಿ ಇರಿಗೇಷನ್ ವೆಲ್ಸ್ ತೆಗೆಯಲಿಕ್ಕೆ ಇಂಡಿವಿಜ್ಯುಯಲ್ಸ್‌ಗೆ ಕೊಡಲಿಕ್ಕೆ ಬರುತ್ತದೆ. ಕಮ್ಯೂನಿಟಿ ವೆಲ್ಸ್ ತೆಗೆಯಲಿಕ್ಕೆ ಬರುತ್ತದೆ.

ಶ್ರೀ ಐ. ಸೋಮಶೇಖರಪ್ಪ:—ಯಾವುದಾದರೂ ಒಬ್ಬ ವ್ಯಕ್ತಿ ಸಾಲ ಪಡೆಯಬೇಕಾದರೆ ಅವನು ಎಂ ಎಲ್ ಎ ಸಂಬಂಧಿಕನಾಗಿರಬಾರದೂ ಎಂದು ಹೇಳಿ ನಿಬಂಧನೆಯೇನಾದರೂ ಇದೆಯೆ?

ಶ್ರೀ ಎಚ್. ವಿ. ಕೌಜಲಗಿ: - ಅಂತಹ ನಿರ್ಭಂದವೆನೂ ಇಲ್ಲ, ಎಲ್ಲಿ ಬಾವಿ ತೆಗೆಯಬೇಕಾದ ಆಗತ್ಯ ಇದೆ ಅಂಥಲ್ಲಿ ಯಾರು ಕೇಳುತ್ತಾರೋ ಅಂಥವರಿಗೆ ಯಾರೇ ಆದರೂ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಸಿದ್ಧವೀರಪ್ಪ: ಇನ್ನೊಬ್ಬರಿಗೆ ಕೊಡಕೂಡದು ಒಂದು ತಾಲ್ಲೂಕಿನವರೇ ದುಡು ಪಡಿಕೊಳ್ಳಬೇಕೆಂದು ನಿಬಂಧನೆಯೇನಾದರೂ ಇದೆಯೇ?

(ಉತ್ತರ ಇಲ್ಲ)

ಶ್ರೀ ಕೆ. ಪ್ರಭಾಕರ್: ಈ ದುಡ್ಡನ್ನು ಹಂಚುವುದರ ಬಗ್ಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್ ಮೆಂಟಿಗೆ ಇಷ್ಟು, ಆಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಇಷ್ಟು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈ ರೀತಿ ಕೊಡುವ ದುಡ್ಡಿನ ವಿನಿಯೋಗದ ಮೇಲೆ ಸರ್ಕಾರದವರಿಗೆ ಕಂಟ್ರೋಲ್ ಇಲ್ಲವೆ?

ಶ್ರೀ ಹೆಚ್. ವಿ. ಕೌಜಲಗಿ:— ಈ ಕೆಲಸಗಳಿಗೆ ಸರಿಯಾಗಿ ವಿನಿಯೋಗವಾಗುತ್ತಿದೆಯೇ ಇಲ್ಲವೆ ಎಂಬುದನ್ನು ರೆವಿನ್ಯೂ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಖಾತೆಯವರು ನೋಡಿಕೊಳ್ಳುತ್ತಾರೆ.

DEVELOPMENT OF INLAND FISHERIES

200 SRI H. PUTTADAS (Sathnoor)—Will the Minister of State for Fisheries and Ports be placed to state :—

(*a*) the steps taken by Government to develop Inland Fisheries :

(*b*) the amount earmarked for this purpose for the current year ;

(*c*) the areas or the districts that will be covered by this scheme ?

A SRI H. C. LINGA REDDY. (Minister of State for Fisheries and Ports)

(*a*) The following are the steps taken by Government to develop inland fisheries :—

(i) increasing the production and supply of the seed of economical varieties of fish suitable for culture, and for this purpose :

(ii) setting up new fish seed production farms and expansion of existing farms and

(Sri H. C. LINGA REDDY)

(iii) providing increased nursery facilities for rearing fish seed :

(iv) development and exploitation of fishereis in reservoirs ;

(v) extension of fish culture in the rural areas through the Applied Nutrition Programme and intensive development of fisheries in Community Development Blocks :

(vi) training of fishermen in fish culture and deep water fishing ;

(vii) socio-economic improvement of fishermen through education, co-operation, financial assistance etc.

(*b*) Rs. 49.5 lakhs.

(*c*) The Inland Fisheries Development Schemes extend to all the districts in the State.

ಶ್ರೀ ಎಚ್ ಪುಟ್ಟದಾಸ್ :—ಒಳನಾಡಿನ ಮೀನುಗಾರಿಕೆ ಯೋಜನೆಯು ಅನ್ವಯವಾಡಿ ಈ ವರ್ಷ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಿದ್ದೀರಿ ಹಾಗೂ ಎಷ್ಟು ಮೀನು ಮರಿಗಳನ್ನು ಬಿಟ್ಟಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ :—ಈಗ ತಯಾರುಮಾಡುತ್ತಾ ಇರುವುದು ನುಮಾರು ಮೂರು ಕೋಟಿ ಮರಿಗಳು, ಅದರಲ್ಲಿ ಕೆಲವು ಭಾಗ ಕಲ್ಕತ್ತಾದಿಂದ ತರಿಸಿಕೊಳ್ಳುತ್ತಾ ಇದ್ದೇವೆ. ಸುದ್ಯೆವದಿಂದ ಬೇಕಾದಷ್ಟು ಕೆರೆಗಳಿಗೆ, ಹೊಳಿಗಳಿಗೆ ನೀರು ಬಂದಿದೆ, ಎಲ್ಲಾ ಕಡೆಯೂ ಮೀನು ಮರಿಗಳನ್ನು ಬಿಟ್ಟಿದ್ದೇವೆ. ಎಷ್ಟು ಅಂಬುದನ್ನು ವರ್ಷದ ಕೊನೆಯಲ್ಲಿ ಹೇಳುತ್ತೇನೆ. ಮರಿಗಳು ಎಷ್ಟು ಇವೆಯಂತೊ ಅದನ್ನು ನೋಡಿಕೊಂಡು ನೀರು ಹೆಚ್ಚು ಎಲ್ಲಿ ಇರುತ್ತದೆಯೋ ಅಲ್ಲಿಗೆ ಕೊಡುತ್ತಾ ಇದ್ದೇವೆ.

ಶ್ರೀ ಬಿ. ಎನ್. ಇದಿನಬ್ಬ: ನಮ್ಮ ರಾಜ್ಯದಲ್ಲಿ ಧರ್ಮಾರ್ಥವಾಗಿ ಸಿಕ್ಕಿದ ೨೦೦ ಮೈಲಿ ಕರಾವಳಿ ಪ್ರದೇಶ ಇದೆ, ಸಮುದ್ರದಲ್ಲಿ ಕೋಟಿ ಕೋಟಿಗಟ್ಟಲೆ ಮೀನು ಸಿಕ್ಕುತ್ತದೆ., ಅದನ್ನು ಪಡೆದು ಅಭಿವೃದ್ಧಿ ಮಾಡಲಿಕ್ಕೆ ಏನು ಕ್ರಮ ಇಟ್ಟು ಕೊಂಡಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ :—ಈ ಪ್ರಶ್ನೆಯಲ್ಲಿ ಅದು ಉದ್ಭವಿಸುವುದಿಲ್ಲ. ಕರಾವಳಿ ಮೀನು ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :—ಒಳನಾಡಿನ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ೪೯.೫ ಲಕ್ಷ ರೂಪಾಯಿಗಳು ಸಾಲುವುದಿಲ್ಲ ಎಂದು ನನ್ನ ಭಾವನೆ. ಏಕೆಂದರೆ ಈ ಕೆರೆಗಳಿಗೆ, ಕೊಳಗಳಿಗೆ ಹೆಚ್ಚಾಗಿ ಮಿನಿಸ್ಟರು ಟೂರ್ ಮಾಡಬೇಕು. ಆದ್ದರಿಂದ ದಯವಿಟ್ಟು ಈ ಹಣವನ್ನು ಜಾಸ್ತಿಮಾಡಿ ಮಿನಿಸ್ಟರು ಕೆರೆ, ಕಟೆ, ಬಾವಿಗಳನ್ನು ಹೆಚ್ಚಾಗಿ ಟೂರ್ ಮಾಡಲು ಅವಕಾಶಮಾಡಿ ಕೊಡಬೇಕು. ಇದಕ್ಕೆ ಇನ್ನೂ ಎಷ್ಟು ಲಕ್ಷ ರೂಪಾಯಿ ಬೇಕು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ :—ಈ ಪ್ರಶ್ನೆಯಲ್ಲಿ ಇದು ಉದ್ಭವಿಸುವುದಿಲ್ಲ.

SMT. WINNIFRED F. FERNANDES : There are several inland fisheries in South Kanara District. What are the different developmental schemes you have undertaken so far regarding inland fisheries in South Kanara District ?

SRI H. C. LINGA REDDY :—In South Kanara District we have some inland fisheries development schemes as well as in North Kanara and in the marine districts in the upghat areas there are some water-sheds. For quick growing variety of Catla. etc., there is the rehabilitation scheme in the coastal areas also. In Kumta, which is very near to the place of the hon. lady member, these programmes have been put into execution.

ಉಪಾಧ್ಯಕ್ಷರು :—ಮುಖ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲದಿರುವುದರಿಂದ ಈ ಪ್ರಶ್ನೆ ನಿಂತಿದೆ. ಮುಂದಕ್ಕೆ ಹಾಕುತ್ತೇನೆ.

TAPPING AND UTILISATION OF UNDERGROUND WATER

246. Sri A. R. BADARINARAYAN (Shimoga) —

Will the Minister for Industries, Information and Publicity be pleased to state.—

(*a*) Whether there is central scheme for tapping and utilising the underground water in the state;

(*b*) if so, the funds made available to the State under the said scheme

(*c*) whether Government have undertaken any surveys to locate the availability of underground water?

SRI A. P. APPANNA (DEPUTY MINISTER FOR INDUSTRIES).

(*a*) No.

(*b*) Does not arise.

(*c*) Yes. Under the schemes of the Fourth Five Year plan, the Department of Mines and Geology have undertaken systematic surveys for underground water resources in the State.

ಶ್ರೀ ಎ. ಆರ್. ಬದರೀನಾರಾಯಣ್.—ರಾಜ್ಯದಲ್ಲಿ ಡ್ರೈ ಫಾರ್ಮಿಂಗಿಗೆ ಬೇಕಾದಂತೆ ಅಂಡರ್‌ಗ್ರೌಂಡ್ ವಾಟರ್‌ಗೆ ಎಷ್ಟು ಅವಕಾಶ ಮಾಡಿದ್ದೀರಿ?

SRI A. P. APPANNA:—We are not collecting data either for dry farming or wet farming. A survey has been done in those Taluks where there was famine and where there is paucity of drinking water. On the basis of this, we can provide water where there is scarcity of drinking water. On this basis we have prepared schemes for 27 taluks in the State.